ದಿನಾಂಕ 02-05-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಅರ್ಜಿದಾರರ ಪರ ಕು. ಎ.ಎಸ್., ವಕೀಲರಿಂದಃ**

ನಾನು ಸಹಿ ಮಾಡಿರುವ ಮುಖ್ಯ ವಿಚಾರಣೆಯ ಪ್ರಮಾಣ ಪತ್ರ ಸಲ್ಲಿಸಿದ್ದೇನೆ. ಅದರಲ್ಲಿರುವ ವಿಷಯಗಳು ಸರಿ ಇವೆ ಮತ್ತು ಇವು ನನ್ನ ಹೇಳಿಕೆಯ ಮೇರೆಗೆ ತಯಾರಿಸಲಾಗಿದೆ. ನಾನು ನನ್ನ ಅರ್ಜಿಯ ಜೊತೆ ಕೆಲವು ದಾಖಲಾತಿಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ನೋಡಿ ಗುರುತಿಸುತ್ತೇನೆ. ಸದರಿ ದಾಖಲಾತಿಗಳನ್ನು ಈ ಕೆಳಕಂಡಂತೆ ನಿಶಾನೆಗೊಳಪಡಿಸಲಾಯಿತು.

| | |
|---|---|
| ನಿಪಿ-1 | ಪ್ರಥಮ ವರ್ತಮಾನ ವರದಿ ದೃಢೀಕೃತ ನಕಲು, |
| ನಿಪಿ-2 | ದೂರಿನ ದೃಢೀಕೃತ ನಕಲು, |
| ನಿಪಿ-3 | ಸ್ಥಳ ಮಹಜರ್‌ನ ದೃಢೀಕೃತ ನಕಲು, |
| ನಿಪಿ-4 | ಕೈ ನಕಾಶೆಯ ದೃಢೀಕೃತ ನಕಲು, |
| ನಿಪಿ-5 | ಐ.ಎಂ.ವಿ ವರದಿಯ ದೃಢೀಕೃತ ನಕಲು, |
| ನಿಪಿ-6 | ಗಾಯದ ಪ್ರಮಾಣ ಪತ್ರದ ದೃಢೀಕೃತ ನಕಲು, |
| ನಿಪಿ-7 | ಎ.ಐ.ಆರ್ ವರದಿಯ ದೃಢೀಕೃತ ನಕಲು, |
| ನಿಪಿ-8 | ಅಂತಿಮ ವರದಿಯ ದೃಢೀಕೃತ ನಕಲು, |
| ನಿಪಿ-9 | ನನ್ನ ಆಧಾರ್ ಕಾರ್ಡಿನ ಸ್ವ ದೃಢೀಕೃತ ನಕಲು,<br>(ಮೂಲ ದಾಖಲಾತಿ ಪರೀಶಿಲಿಸಿ ವಾಪಾಸು ನೀಡಲಾಯಿತು), |
| ನಿಪಿ-10 | ಚಿಕಿತ್ಸಾ ಪ್ರಮಾಣ ಪತ್ರ, |
| ನಿಪಿ-11 | ಅಂಗನ್ಯೂನ್ಯತಾ ಪ್ರಮಾಣ ಪತ್ರ, |

| | |
|---|---|
| ನಿಪಿ-12 | ಅಂಗವೈಕಲ್ಯತೆಯ ಗುರುತಿನ ಚೀಟಿಯ ಕಲರ್ ಪ್ರತಿ, (ಮೂಲ ಪ್ರತಿಯನ್ನು ಹಾಜರುಪಡಿಸಿರದ ಕಾರಣ 2 ನೇ ಎದುರುದಾರರ ಪರ ವಕೀಲರ ತಕರಾರಿಗೆ ಒಳಪಟ್ಟು ಗುರುತಿಸಲಾಯಿತು). |
| ನಿಪಿ-13 | ಕೆ.ಎಂ.ಸಿ., ವೈದ್ಯರು ನೀಡಿರುವ ಪ್ರಮಾಣ ಪತ್ರದ ನಕಲು ಪ್ರತಿ, (ಮೂಲ ದಾಖಲಾತಿಯನ್ನು ಹಾಜರುಪಡಿಸುವ ಷರತ್ತಿನ ಮೇರೆಗೆ ಗುರುತಿಸಲಾಯಿತು). |
| ನಿಪಿ-14 | ಕೆ.ಎಂ.ಸಿ., ಆಸ್ಪತ್ರೆಯ ಮೆಡಿಕಲ್ ಬಿಲ್ಲುಗಳು ಒಟ್ಟು 29, |
| ನಿಪಿ-15 | ಹೈ-ಟೆಕ್ ಮೆಡಿಕೇರ್ ಆಸ್ಪತ್ರೆಯ ಮೆಡಿಕಲ್ ಬಿಲ್ಲುಗಳು ಒಟ್ಟು 05, |
| ನಿಪಿ-16 ಮತ್ತು 17 | ಕೆ.ಎಂ.ಸಿ., ಆಸ್ಪತ್ರೆಯ ಒಳರೋಗಿ ಬಿಲ್ಲುಗಳು, |
| ನಿಪಿ-18 | ಹೈ-ಟೆಕ್ ಮೆಡಿಕೇರ್ ಆಸ್ಪತ್ರೆಯ ಒಳರೋಗಿ ಬಿಲ್ಲು, |
| ನಿಪಿ-19 | ಎಂಡೋಲೈಟ್ ಏಜೆನ್ಸಿಯವರು ನೀಡಿರುವ ಬಿಲ್ಲು, |
| ನಿಪಿ-20 | ಮುಂಗಡ ರಶೀದಿಗಳು ಒಟ್ಟು 08, |
| ನಿಪಿ-21 | ವೈದ್ಯರ ಸಲಹಾ ಚೀಟಿಗಳು ಒಟ್ಟು 03. |

**ಈ ಹಂತದಲ್ಲಿ ಮುಂದುವರಿದ ಮುಖ್ಯ ವಿಚಾರಣೆಗೆ ವಕೀಲರು ಕಾಲಾವಕಾಶ ಕೋರಿದ್ದು, ನೀಡಲಾಗಿದೆ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸ.ಇದೆ ಎಂದು ಒಪ್ಪಿದರು

ಪ್ರ.ಹಿ.ಸಿ.ನ್ಯಾ. ಉಡುಪಿ.